

# ಅತಿ ಪ್ರಾಚೀನ ರೇಲ್ವೆ ಸೇತುವೆ



ಮೈಸೂರು ಸಮೀಪ ಕಬಿನಿ ನದಿಗೆ ಅಡ್ಡಲಾಗಿ ಕಟ್ಟಿದ ರೈಲು ಸೇತುವೆ ಪ್ರಪಂಚದ ಅತ್ಯಂತ ಪ್ರಾಚೀನ ಸೇತುವೆಯಾಗಿದೆ. ಇಂದಿಗೂ ಅದು ಸುಸ್ಥಿತಿಯಲ್ಲಿರುವುದು ಬೆರಗು ಹುಟ್ಟಿಸುತ್ತದೆ.

ಚಿತ್ರ-ಲೇಖನ: ಎಂ.ಎನ್. ಜೋಷಿ

ಮೈಸೂರಿನಿಂದ ನಂಜನಗೂಡಿಗೆ ರೈಲು ಪ್ರಯಾಣ ಮಾಡುವಾಗ ತಾಂಡವಪುರ ಹಾಗೂ ನಂಜನಗೂಡು ಮಧ್ಯೆ, ಸುಜಾತಪುರಂ ಹತ್ತಿರ, ಕಬಿನಿ ನದಿಗೆ ಅಡ್ಡಲಾಗಿ ಕಟ್ಟಿದ ಜಗತ್ತಿನ ಅತ್ಯಂತ ಹಳೆಯ ಐತಿಹಾಸಿಕ ರೇಲ್ವೆ ಸೇತುವೆ ಕಾಣಸಿಗುತ್ತದೆ. ಎರಡೂವರೆ ಶತಮಾನಗಳಿಗಿಂತಲೂ ಮೊದಲು, 1735ರಲ್ಲಿ ಈ ಸೇತುವೆಯನ್ನು ನಿರ್ಮಿಸಲಾಗಿದ್ದು, 278 ವರ್ಷಗಳಷ್ಟು ಹಳೆಯದಾಗಿದ್ದರೂ, ಇಂದಿಗೂ ಹಾಳಾಗದೆ ಸುಸ್ಥಿತಿಯಲ್ಲಿರುವುದು ಕಂಡರೆ, ಅಂದಿನ ಸೇತುವೆ ನಿರ್ಮಾಣದ ಇಂಜಿನಿಯರಿಂಗ್ ಕೌಶಲ್ಯ ಬೆರಗು ಉಂಟು ಮಾಡುತ್ತದೆ.

ಬಂಡೆಗಲ್ಲುಗಳ ಭದ್ರ ಬುನಾದಿ ಹೊಂದಿರುವ ಈ ಸೇತುವೆಯನ್ನು ಇಟ್ಟಿಗೆ, ಮರಳು, ಗಾರೆಗಳಿಂದ ನಿರ್ಮಿಸಲಾಗಿದೆ. 8 ಅಡಿ ಎತ್ತರ ಹಾಗೂ 5 ಅಡಿ 6 ಅಂಗುಲ, ಅಗಲವಾಗಿರುವ 54 ಸುಂದರ ಕಮಾನುಗಳ ಮೇಲೆ ನಿಂತಿರುವ ನೋಟ ನಯನ ಮನೋಹರವಾಗಿದೆ.

ಮೈಸೂರಿನಿಂದ ನಂಜನಗೂಡಿಗೆ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಈ ಸೇತುವೆ ನಿರ್ಮಿಸಲಾಯಿತು. ಎತ್ತಿನ ಗಾಡಿ, ಜಟಕಾ ಬಂಡಿ, ಜನರು ಇನ್ನಿತರ ವಾಹನಗಳು ಸಂಚರಿಸುವ ಸೇತು ಮಾರ್ಗ ವಾಗಿತ್ತು. ಮೈಸೂರಿನಿಂದ ನಂಜನಗೂಡಿಗೆ ಮೀಟರ್‌ಗೇಜ್ ರೈಲು ಮಾರ್ಗ ಹಾಕಲು, ಅಗಲವಾದ ಈ ಸೇತುವೆಯ ಒಂದು ಪಾರ್ಶ್ವವನ್ನು ಬಳಸಿಕೊಳ್ಳಲಾಯಿತು. ಸೇತುವೆಯ ಹಳಿಯ ಮೇಲೆ ಓಡಾಡುವ ರೈಲಿನ ಹೊರೆಯನ್ನು ಹಾಗೂ, ಸೇತುವೆಯ ರಸ್ತೆಯ ಮೇಲೆ ಸಾಗುವ ವಾಹನಗಳ ಭಾರವನ್ನು ಏಕಕಾಲದಲ್ಲಿ ಹೊರುವ ಸಾಮರ್ಥ್ಯ ಈ ಕಬಿನಿ ಸೇತುವೆ ಹೊಂದಿತ್ತು.

ಸೇತುವೆಯ ಪ್ರಾಚೀನತೆಯ ಬಗ್ಗೆ ನಿಖರವಾಗಿ ತಿಳಿಯದಿದ್ದರೂ, 1935ರಲ್ಲಿ ಶ್ಯಾಮರಾವ್ ಹಾಗೂ ಹಿಗ್ಗನ್ ಬೋಥಮ್ ಬರೆದ 'ಹಿಸ್ಟರಿ ಆಫ್ ಮಾಡರ್ನ್ ಮೈಸೂರ್' ಗ್ರಂಥದಲ್ಲಿ ಇದರ ಕೆಲವು ವಿಚಾರಗಳು ಸಿಗುತ್ತವೆ. ಕಬನಿ ಸೇತುವೆಯು 270 ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿತ್ತು. ಬ್ರಿಟಿಷ್ ಸರ್ಕಾರವು ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಡೆನ್ಮಾರ್ಕಿನ ಕ್ರೈಸ್ತ ಧರ್ಮಪ್ರಚಾರಕ ರೆವರೆಂಡ್ ಕ್ವಾರ್ಟ್ಜರನ್ನು ತಮ್ಮ ಗುಪ್ತಚಾರನಾಗಿ ಹೈದರ್ ಅಲಿಯ ಜೊತೆ ಸಮಾಲೋಚನೆಗಾಗಿ ಕಳುಹಿಸಿದಾಗ ಇದರ ವಿಷಯ ಹೀಗೆ ದಾಖಲಿಸಿದ್ದಾನೆ.

'1735ರಲ್ಲಿ ದಳವಾಯಿ ದೇವರಾಜನು ಕಟ್ಟಿಸಿದ ಸೇತುವೆಯ ಮೂಲಕ ಕಬನಿ ನದಿಯನ್ನು 23 ಆಗಸ್ಟ್ 1779 ರಂದು ನಾನು ದಾಟಿದೆ. ಸೇತುವೆಯು ಬಹಳ ಗಟ್ಟಿಯಾಗಿದ್ದು, ಕಬನಿ ನದಿಗೆ ಅಡ್ಡಲಾಗಿ ಕಟ್ಟಿದ 23 ಬಲವಾದ ಕಮಾನುಗಳ ಆಧಾರದ ಮೇಲೆ ನಿಂತಿದೆ' ಎಂದಿದ್ದಾನೆ. ಉಳಿದ 31 ಕಮಾನುಗಳನ್ನು 20ನೇ ಶತಮಾನದ ಬೇರೆ ಬೇರೆ ಕಾಲಗಳಲ್ಲಿ ನಿರ್ಮಿಸಿರಬೇಕು.

ಮುಂದಿನ ದಿನಗಳಲ್ಲಿ ಬ್ರಾಡ್‌ಗೇಜ್ ರೇಲ್ವೆ ಮಾರ್ಗ ಹಾಗೂ, ರಾಜ್ಯ ಹೆದ್ದಾರಿ 17ಕ್ಕಾಗಿ ಹಳೆಯ ಕಬಿನಿ ಸೇತುವೆಯ ಅಕ್ಕಪಕ್ಕಗಳಲ್ಲಿಯೇ ಪ್ರತ್ಯೇಕ ಎರಡು ಸೇತುವೆ ನಿರ್ಮಿಸಲಾಯಿತು. 1902 ರಿಂದ 2007 ರವರೆಗೆ ಹಳೆಯ ಮೀಟರ್‌ಗೇಜ್ ಸೇತುವೆಯ ಮೇಲೆಯೆ ರೈಲುಗಳು ಸಂಚರಿಸುತ್ತಿದ್ದವು.

17 ಜನವರಿ 2007 ರಂದು ಮೈಸೂರು ನಂಜನಗೂಡು ಪ್ಯಾಸೆಂಜರ್ ರೈಲು, ಈ ಹಳೆಯ ಸೇತುವೆಯ ಮೀಟರ್‌ಗೇಜ್ ಹಳಿಯ ಮೇಲೆ ಕೊನೆಯದಾಗಿ ಓಡಿದ್ದು, ಇಂದಿಗೂ ಈ ಎರಡು ಹೊಸ ಸೇತುವೆಗಳ ನಡುವೆ ಪುರಾತನ ಸೇತುವೆ ಸುಸ್ಥಿತಿಯಲ್ಲಿದ್ದು, ರಾರಾಜಿಸುತ್ತಿದೆ.

1735ರಲ್ಲಿ ನಿರ್ಮಿಸಲ್ಪಟ್ಟ ಈ ಕಬಿನಿ ಸೇತುವೆಯೆ ಪ್ರಪಂಚದ ಅತಿ ಪ್ರಾಚೀನ ರೇಲ್ವೆ ಸೇತುವೆ ಎನಿಸಿಕೊಂಡಿದೆ. ಏಕೆಂದರೆ ಕ್ರಿ.ಶ. 1825ರ ನಂತರವೆ, ಪ್ರಥಮವಾಗಿ ರೈಲುಮಾರ್ಗ ನಿರ್ಮಾಣಗೊಂಡಿದ್ದು. ಅದೂ ಅಲ್ಲದೆ ಪ್ರಾಚೀನ ರಸ್ತೆ ಸೇತುವೆಯನ್ನೇ ರೈಲು ಸಂಚಾರಕ್ಕೂ ಬಳಸಿಕೊಂಡ ಉದಾಹರಣೆ ಜಗತ್ತಿನ ಇನ್ನಾವ ಭಾಗದಲ್ಲೂ ಕಂಡುಬರುತ್ತಿಲ್ಲ. 1735ರಲ್ಲಿ ಅಂದರೆ 278 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸುಂದರ ಸೇತುವೆಯನ್ನು ಕೇಂದ್ರ ಸರ್ಕಾರವು ಪಾರಂಪರಿಕ ಸ್ಮಾರಕ ಎಂದು ಘೋಷಿಸಿದೆ. ಪ್ರಪಂಚದ ಅತಿ ಪ್ರಾಚೀನ ರೇಲ್ವೆ ಸೇತುವೆ ಕನ್ನಡ ನಾಡಿನಲ್ಲಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಇಂದಿನ ಕಾಮಗಾರಿ ನಿರ್ವಹಣೆ ಹೊತ್ತವರಿಗೆ ಮಾದರಿ ಕೂಡ.